## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 02.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ದಾವೆಗೆ ಸಂಬಂಧಿಸಿದಂತೆ ಮುಂದುವರೆದು ದಿಃ 22/12/2022 ರಂದು ನೊಂದಾಯಿಸಲಾದ ಮೂಲ ಖರೀದಿ ಕರಾರು ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.1 ಎಂದು, 1 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.1(ಎ) ಎಂದು, ಅವರ ಮಗನಾದ ಮಲ್ಲಿಕಾರ್ಜುನ ಕೂಡ ಸದರಿ ದಾಖಲೆಗೆ ಸಹಿ ಮಾಡಿದ್ದಾರೆಂದು ಸಾಕ್ಷಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.1(ಬಿ) ಎಂದು, ಸಾಕ್ಷಿದಾರರಾದ ಉಲ್ಲಾಸ ಮತ್ತು ಪ್ರಕಾಶ ಬಿ ಇವರು ಸಹಿ ಮಾಡಿರುತ್ತಾರೆಂದು ಸಾಕ್ಷಿ ಗುರುತಿಸಿದ್ದು ಅವರ ಸಹಿಗಳನ್ನು ನಿಪಿ.1(ಸಿ) ಮತ್ತು ನಿಪಿ.1(ಡಿ) ಎಂದು, 1 ನೇ ಪ್ರತಿವಾದಿಯ ಮತ್ತೊಬ್ಬ ಮಗನಾದ ಶಿವಾನದ ಎಂಬುವವರು ಕೂಡ ಸಹಿ ಮಾಡಿರುತ್ತಾರೆಂದು ಸಾಕ್ಷಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.1(ಇ) ಎಂದು, ಮತಸ್ತು ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.1(ಎಫ್) ಎಂದು, ಸರ್ವೆ ನಂ.61/2 ಗಬ್ಬೂರ ಗ್ರಾಮದ 2023-24 ನೇ ಸಾಲಿನ ಪಹಣಿಪಿಯನ್ನು ಹಾಜರಪಡಿಸಿದ್ದು ಅದನ್ನು ನಿಪಿ.2 ಎಂದು, ಲಿಗಲ್ ನೋಟೀಸ್ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.3 ಎಂದು, ಅಂಚೆ ರಶೀದಿ ಹಾಗೂ ಅಂಚೆ ಹಿಂಬರಹವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.4 ಮತುತ 5 ಎಂದು, ಮತ್ತೊಂದು ಲಿಗಲ್ ನೋಟೀಸನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.6 ಎಂದು, ಮತ್ತೊಂದು ಲಿಗಲ್ ನೋಟೀಸನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.7 ಎಂದು, ಅಂಚೆ ರಶೀದಿ ಹಾಗೂ ಅಂಚೆ ಹಿಂಬರಹವನ್ನು ಹಾಜರುಪಡಿಸಿದ್ದು

ಸದರಿ ದಾಖಲೆಯನ್ನು ನಿಪಿ.8 ಮತ್ತು 9 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಆದರೆ ಸದರಿಯವರು ಲಿಖಿತ ತಕರಾರು ಸಲ್ಲಿಸದಿರುವ ಕಾರಣ ಅವರ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).**

**(1 ನೇ ಪ್ರತಿವಾದಿ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿರುವ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**